# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 141 |
| ಮಾನ್ಯ ಸದಸ್ಯರ ಹೆಸರು | : ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) |
| ವಿಷಯ | : ಐತಿಹಾಸಿಕ ಬೀದರ್ ಕೋಟೆಗಳ ನಿರ್ವಹಣೆ ಕುರಿತು. |
| ಉತ್ತರಿಸುವ ದಿನಾಂಕ | : 10.12.2018 |
| ಉತ್ತರಿಸುವ ಸಚಿವರು | : ಪ್ರವಾಸೋದ್ಯಮ ಹಾಗೂ ರೇಷ್ಮೆ ಇಲಾಖೆ ಸಚಿವರು |

<table>
<tr><th>ಕ್ರ. ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ ಇತಿಹಾಸ ಬಿಂಬಿಸುವ ಐತಿಹಾಸಿಕ ನಾಲ್ಕು ಕೋಟೆಗಳನ್ನು ಮಾದರಿ ಪ್ರವಾಸಿ ತಾಣಗಳನ್ನಾಗಿ ರೂಪಿಸಲಾಗಿದೆಯೇ; ಇದನ್ನು ಯಾವಾಗ ರೂಪಿಸಲಾಯಿತು; (ಸಂಪೂರ್ಣ ಮಾಹಿತಿ ನೀಡುವುದು)</td><td>ಬೀದರ್ ಜಿಲ್ಲೆಯಲ್ಲಿರುವ ಕೆಳಕಂಡ ಕೋಟೆಗಳ ಸಂರಕ್ಷಣೆಯನ್ನು ರೂ.800.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಂಡು ಮಾದರಿ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ವಿವರವಾದ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.
<table>
<tr><th>ಕ್ರ. ಸಂ</th><th>ಕೋಟೆಯ ಹೆಸರು</th><th>ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)</th></tr>
<tr><td>1</td><td>ಭಾಲ್ಕಿ ಕೋಟೆ</td><td>200.00</td></tr>
<tr><td>2</td><td>ಬಸವ ಕಲ್ಯಾಣ ಕೋಟೆ</td><td>200.00</td></tr>
<tr><td>3</td><td>ಭಾತಂಬ್ರ ಕೋಟೆ</td><td>200.00</td></tr>
<tr><td>4</td><td>ಬೀದರ ಕೋಟೆ</td><td>200.00</td></tr>
<tr><td></td><td>ಒಟ್ಟು</td><td>800.00</td></tr>
</table></td></tr>
<tr><td>ಆ)</td><td>ಈ ಯೋಜನೆಯು ಎಷ್ಟು ಮೊತ್ತದಲ್ಲಿ ರೂಪುಗೊಂಡಿದೆ; ಇದಕ್ಕೆ ಈವರೆಗೆ ಎಷ್ಟು ಮೊತ್ತ ಬಿಡುಗಡೆ ಮಾಡಲಾಗಿದೆ.</td><td>ಮೇಲ್ಕಂಡ ಕೋಟೆಗಳ ಸಂರಕ್ಷಣೆಯನ್ನು ರೂ.800.00 ಲಕ್ಷಗಳಲ್ಲಿ ಕೈಗೊಳ್ಳಲು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಸಲ್ಲಿಸಿದ ಮೇಲೆ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿ ಪ್ರಾರಂಭಿಸಲು ಅನುದಾನ ಬಿಡುಗಡೆ ಮಾಡಲಾಗುವುದು ಅಂದಾಜು ಪಟ್ಟಿಗಳನ್ನು ಸಲ್ಲಿಸುವಂತೆ ಆಯುಕ್ತರು ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ರವರನ್ನು ಕೋರಲಾಗಿದೆ.</td></tr>
<tr><td>ಇ)</td><td>ಈ ಯೋಜನೆಯಡಿ ಈವರೆಗೆ ಕೈಗೆತ್ತಿಕೊಂಡಿರುವ ಕಾಮಗಾರಿಗಳಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಉದ್ಭವಿಸುವುದಿಲ್ಲ</td></tr>
</table>

| | | |
|---|---|---|
| ಈ) | ಈ ಐತಿಹಾಸಿಕ ಕೋಟೆಗಳ ಮಹತ್ವ ಹಾಗೂ ಮಾಹಿತಿಯನ್ನು ರಾಜ್ಯದ ಹಾಗೂ ಹೊರ ರಾಜ್ಯಗಳ ಸಾರ್ವಜನಿಕರಿಗೆ ತಲುಪಿಸಲು ಕೈಗೊಂಡಿರುವ ಕ್ರಮಗಳೇನು? (ಪೂರ್ಣ ವಿವರ ನೀಡುವುದು) | ರಾಜ್ಯದ ಪ್ರವಾಸಿ ತಾಣಗಳ ಮಹತ್ವ ಹಾಗೂ ಅವುಗಳ ಪ್ರಚಾರಕ್ಕೆ ಸಂಬಂಧಪಟ್ಟಂತೆ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>1. ಪ್ರವಾಸಿ ತಾಣಗಳನ್ನು ಕುರಿತಂತೆ ಮಡಿಕೆಗಳನ್ನು ಮುದ್ರಿಸಿ ಪ್ರವಾಸಿಗರಿಗೆ ವಿತರಿಸುವುದು.<br>2. ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿದ ದಿನ ಪತ್ರಿಕೆಗಳು ಹಾಗೂ ಸಂಚಿಕೆಗಳಲ್ಲಿ ಜಾಹಿರಾತುಗಳನ್ನು ಪ್ರಕಟಿಸುವುದು<br>3. ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಜರುಗುವ ವಿವಿಧ ಪ್ರವಾಸಿ ಮೇಳಗಳು/ಟ್ರಾವೇಲ್ ಮಾರ್ಟ್‌ಗಳಲ್ಲಿ ಪ್ರಚಾರ ನೀಡುವುದು, ರೋಡ್ ಶೋಗಳನ್ನು ಆಯೋಜಿಸುವುದು.<br>4. ಪ್ರವಾಸಿ ತಾಣಗಳನ್ನು ಕುರಿತಂತೆ ಟಿ.ವಿ, ರೇಡಿಯೋ, ಸಿನಿಮಾ ಥಿಯೇಟರ್ ಹಾಗೂ ಡಿಜಿಟಲ್ ಮತ್ತು ಸೋಶಿಲ್ ಮಿಡಿಯಾಗಳಲ್ಲಿ ಜಾಹಿರಾತು ನೀಡಲಾಗುತ್ತಿದೆ. |

ಸಂಖ್ಯೆ: ಪ್ರಇ 98 ಪ್ರವಾವಿ 2018

(ಸಾ.ರಾ. ಮಹೇಶ್)
;ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು